**ದಿನಾಂಕ 30.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಶ್ರೀ ಹೆಚ್.ಪಿ.ವಿ. ವಾದಿಯರ ಪರ ವಕೀಲರಿಂದಃ-**

ನನ್ನ ಮುಖ್ಯ ವಿಚಾರಣೆಯ ಭಾಗವಾಗಿ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳು ನಿಜ ಇರುತ್ತವೆ. ಅವು ನನ್ನ ಮಾಹಿತಿ ಪ್ರಕಾರ ಇರುತ್ತವೆ. ಅವುಗಳನ್ನು ನಾನೇ ಹೇಳಿ ಬರೆಸಿರುತ್ತೇನೆ.

ದಿನಾಂಕ 02.08.2021 ರ ನೊಂದಾಯಿತ ಕ್ರಯದ ಕರಾರು ಪತ್ರ, ಆಸ್ತಿ ಋಣಭಾರ ಪತ್ರ, ಸರ್ವೆ ನಂಬರ್ 34/2, 34/3 ರ ಪಹಣಿ ಪತ್ರಿಕೆಗಳು, 1 ನೇ ಪ್ರತಿವಾದಿಯ ಗಂಡನ ಮರಣ ಪ್ರಮಾಣ ಪತ್ರ, ಕಾನೂನು ನೋಟೀಸಿನ ಕಛೇರಿ ಪ್ರತಿ, 4 ಅಂಚೆ ರಶೀದಿಗಳು, ನನ್ನ ವಕೀಲರ 2 ಪತ್ರಗಳು ಮತ್ತು ಅಂಚೆ ಇಲಾಖೆಯ ಟ್ರಾಕ್ ರೆಕಾರ್ಡ್‌ನ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ.1 ರಿಂದ 9 ಎಂದು ಗುರುತಿಸಲಾಯಿತು.

ನಿಪಿ.1 ರಲ್ಲಿರುವ ನನ್ನ 6 ಸಹಿಗಳನ್ನು ಒಟ್ಟಿಗೆ ನಿಪಿ.1(ಎ) ಎಂದು, 1 ನೇ ಪ್ರತಿವಾದಿಯ 5 ಸಹಿಗಳನ್ನು ಒಟ್ಟಿಗೆ ನಿಪಿ.1(ಬಿ) ಎಂದು, ಅವರ ಗಂಡ ಕೃಷ್ಣಪ್ಪ ರವರ 7 ಸಹಿಗಳನ್ನು ಒಟ್ಟಿಗೆ ನಿಪಿ.1(ಸಿ) ಎಂದು, ಸಾಕ್ಷಿದಾರರಾದ ಹೆಚ್.ಡಿ. ಕೃಷ್ಣಮೂರ್ತಿ ಮತ್ತು ನನ್ನ ಗಂಡ ಪ್ರಹಲಾದ್ ರವರ ಸಹಿಗಳನ್ನು ಕ್ರಮವಾಗಿ ನಿಪಿ.1(ಡಿ), 1(ಇ) ಎಂದು ಮತ್ತು ಪತ್ರ ಬರಹಗಾರರಾದ ಎನ್.ಎಸ್.ಸತ್ಯನಾರಾಯಣ ರವರ ಸಹಿಯನ್ನು ನಿಪಿ.1(ಎಫ್) ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಹನುಮಂತ ಜಿ.ಹೆಚ್.)**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಭದ್ರಾವತಿ**